ಈ) ಇದುವರೆಗೂ ಯೋಜನೆಗೆ ಮಾಡಲಾಗಿರುವ ಖರ್ಚು ಎಷ್ಟು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಪಿರಿಯಾಪಟ್ಟಣ ನಗರದಲ್ಲಿ ವಿದ್ಯುತ್ ಉಪ ಕೇಂದ್ರದ ನಿರ್ಮಾಣ ಕಾರ್ಯವು ಪೂರ್ಣಗೊಂಡಿದ್ದು, ದಿನಾಂಕ 7-10-02 ರಂದು ಈ ವಿದ್ಯುತ್ ಉಪ ಕೇಂದ್ರವು ಚಾಲನೆಗೊಂಡಿದೆ.

ಆ) ಮತ್ತು ಇ) ಉದ್ಭವಿಸುವುದಿಲ್ಲ.

ಈ) ಇದುವರೆಗೆ ಈ ಯೋಜನೆಗೆ ಮಾಡಲಾದ ವೆಚ್ಚ ರೂ. 179.59 ಲಕ್ಷ ರೂ. ಗಳು.

ಪಿರಿಯಾಪಟ್ಟಣ ಪಟ್ಟಣಕ್ಕೆ ಕಾವೇರಿ ನೀರು ಒದಗಿಸುವುದು

2038 (2390) - ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಿರಿಯಾಪಟ್ಟಣ ನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರು ಒದಗಿಸುವ ಯೋಜನೆ ಯಾವ ಹಂತದಲ್ಲಿದೆ?

ಆ) ಕಳೆದ ವಿಧಾನ ಸಭಾ ಅಧಿವೇಶನದಲ್ಲಿ ಮೂರು ತಿಂಗಳಲ್ಲಿ ನೀರು ಒದಗಿಸಲಾಗುವುದೆಂದು ಆಶ್ವಾಸನೆ ನೀಡಲಾಗಿದ್ದು ತಹಲ್‌ವರೆವಿಗೂ ಜಾರಿಯಾಗದಿರಲು ಕಾರಣವೇನು?

ಇ) ಇನ್ನು ಎಷ್ಟು ದಿವಸಗಳಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗುವುದು?

ಈ) ಇದುವರೆವಿಗೂ ಯೋಜನೆಗೆ ವೆಚ್ಚವಾಗಿರುವ ಮೊತ್ತವೆಷ್ಟು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು):

ಅ) ಜಲಶುದ್ಧೀಕರಣಾಗಾರದ ಕಾಮಗಾರಿ ಶೇ. 70 ರಷ್ಟು ಮುಗಿದಿದೆ. ಈ ಯೋಜನೆಯ ಉಳಿದ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಈ ಯೋಜನೆಗೆ ವಿದ್ಯುತ್ ಸಂಪರ್ಕ ಪಡೆಯುವ ಪ್ರಕ್ರಿಯೆ ನಡೆಯುತ್ತಿದೆ. ಹಾಗೂ ಕೊಳವೆ ಮಾರ್ಗದ ಟೆಸ್ಟಿಂಗ್ ಕಾರ್ಯ ನಡೆಯುತ್ತಿದೆ.

ಆ) ಜಲಶುದ್ಧೀಕರಣಾಗಾರದ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಆದ ವಿಳಂಬದಿಂದ ಮೂರು ತಿಂಗಳಲ್ಲಿ ನೀರನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ.

ಇ) ಈ ಯೋಜನೆಯನ್ನು ಸಂಪೂರ್ಣವಾಗಿ 2003ರ ಮಾರ್ಚ್ ಅಂತ್ಯದೊಳಗೆ ಜಾರಿಗೊಳಿಸಲು ಯೋಜಿಸಲಾಗಿದೆ.

ಈ) ಯೋಜನೆಗೆ ಈವರೆಗೆ ರೂ. 413.00 ಲಕ್ಷಗಳು ವೆಚ್ಚವಾಗಿರುತ್ತದೆ.

ರಾಜ್ಯದಲ್ಲಿ ಹೊಸದಾಗಿ ಸಿಎಲ್ 2, ಸಿಎಲ್. 9 ಪರವಾನಗಿ

2040 (2549) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹೊಸ ಸಿಎಲ್ 2, ಸಿಎಲ್ 9 ಸನ್ನದುಗಳನ್ನು ಮಂಜೂರು ಮಾಡಲು ಸರ್ಕಾರ ಉದ್ದೇಶಿಸಿದೆ?

ಆ) ಹಾಲಿ ಸನ್ನದು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಇ) ಇದಕ್ಕಾಗಿ ಈಗಾಗಲೇ ಅರ್ಜಿ ಹಾಕಿ ಪರವಾನಗಿಗಾಗಿ ಕಾಯುತ್ತಿರುವ ಸಂಖ್ಯೆ ಎಷ್ಟು?